**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿತ್ತಾಪೂರ</u>**

**<u>ಸಿ.ಸಿ.ನಂ.1963/2023</u>**

**<u>ಫಿರ್ಯಾದಿಃ-</u>** ಕರ್ನಾಟಕ ಸರ್ಕಾರದ ಪರವಾಗಿಃ ಮಾಡಬೂಳ ಪೊಲೀಸ್ ಠಾಣೆ.

**-:: ವಿರುದ್ಧ ::-**

**<u>ಆರೋಪಿ:-</u>** ರಾಮಚಂದ್ರ ತಂದೆ ಹೇಗಪ್ಪ ಹುಲಿ
ವಃ 63 ವರ್ಷ, ಉಃಚಾಲಕ,
ತಾಃ ಅಂಬೇಡ್ಕರ ಶಾಲೆ ಹತ್ತಿರ,
ಕನಕ ನಗರ ಬ್ರಹ್ಮಪೂರ, ಕಲಬುರಗಿ

********

**-:: ದೋಷಾರೋಪಣೆ::-**

ನಾನು ಶ್ರೀ ಅಭಿಷೇಕ್ ರಾಮಚಂದ್ರ ಜೋಶಿ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಚಿತ್ತಾಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕಃ 09.03.2023 ರಂದು 12-30 ಗಂಟೆ ಸುಮಾರಿಗೆ ಮಾಡಬೂಳ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವಕಲಬುರಗಿ-ಸೇಡಂ ಮುಖ್ಯ ರಸ್ತೆಯ ಗುಂಡಗುರ್ತಿ ಕ.ಇ.ಬಿ. ಆಫೀಸ್ ಎದುರುಗಡೆ ಆರೋಪಿತನಾದ ನೀನು ನಿನ್ನ ವಶದಲ್ಲಿದ್ದ ಕೆ.ಕೆ.ಆರ.ಟಿ.ಸಿ. ಬಸ್ ನಂ.ಕೆಎ-32/ ಎಫ್.-1944 ನೇದ್ದನ್ನು ಅತಿವೇಗ ಮತ್ತು ಅಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು ಸಾಕ್ಷಿ-4 ನೇದ್ದವರು ನಡೆಸುತ್ತಿರುವ ಮೋಟಾರ ಸೈಕಲ ನಂ.ಟಿ.ಎಸ್.09-ಇಸಿ-8009 ನೇದ್ದಕ್ಕೆ ಡಿಕ್ಕಿಪಡಿಸಿದ್ದು, ಆ ಮೂಲಕ ಆರೋಪಿಯಾದ ನೀನು ಭಾ.ದಂ.ಸಂ. ಕಲಂಃ 279 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಅದೇ ದಿನ, ಅದೇ ಸಮಯದಲ್ಲಿ ಮತ್ತು ಅದೇ ಸ್ಥಳದಲ್ಲಿ, ಆರೋಪಿತನಾದ ನೀನು ನಿನ್ನ ವಶದಲ್ಲಿದ ಕೆ.ಕೆ.ಆರ.ಟಿ.ಸಿ. ಬಸ್ ನಂ.ಕೆಎ-32/ ಎಫ್.-1944 ನೇದ್ದನ್ನು ಅತೀವೇಗದಿಂದ ಮತ್ತು ಅಲಕ್ಷತನ ದಿಂದ ಚಾಲಾಯಿಸಿಕೊಂಡು ಬಂದು ಸಾಕ್ಷಿ-4 ಚಲಾಯಿಸುತ್ತಿದ್ದ ಮೋಟಾರ ಸೈಕಲ ನಂ.ಟಿ.ಎಸ್.09-ಇಸಿ-8009 ನೇದ್ದಕ್ಕೆ ಡಿಕ್ಕಿ ಪಡಿಸಿ, ಸಾಕ್ಷಿ-4 ನೇದ್ದವರು ರೋಡಿನ ಮೇಲೆ ಬಿದಿದ್ದು, ಸಾಕ್ಷಿ-1 ನೇದ್ದವರಿಗೆ ಬಲಗೈ ಬುಜಕ್ಕೆ, ಬಲ ತೊಡೆಗೆ, ಹಾಗೂ ಮೊಳಕಾಲಿಗೆ ಭಾರಿ ಒಳಪೆಟ್ಟು ಮತ್ತು ರಕ್ತಗಾಯವಾಗಿದ್ದು ಮತ್ತು ಸಾಕ್ಷಿ-4 ನೇದ್ದವರಿಗೆ ಬಲಗಾಲಿನ ತೊಡೆಯಿಂದ ಪಾದದವರೆಗೆ ಭಾರಿ ರಕ್ತಗಾಯವಾಗಿದ್ದು, ಇದು ಭಾ.ದಂ.ಸಂ.ಕಲಂ. 338 ರ ಅಡಿಯಲ್ಲಿ ಆರೋಪ ಹೊರಿಸಿದೆ.

ಅದೇ ದಿನ, ಅದೇ ಸಮಯದಲ್ಲಿ ಮತ್ತು ಅದೇ ಸ್ಥಳದಲ್ಲಿ, ಆರೋಪಿತನಾದ ನೀನು ಸದರಿ ವಾಹನವನ್ನು ಅತೀ ವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಅಪಘಾತ ಪಡಿಸಿ, ಯಾವುದೇ ತುರ್ತು ಚಿಕಿತ್ಸೆ ನೀಡದೆ ಆರೋಪಿತನಾದ ನೀನು ವಾಹನವನ್ನು ಅಲ್ಲೆ ಬಿಟ್ಟು ಓಡಿ ಹೋಗಿದ್ದು, ಇದು ಕಲಂ 187 ಐ. ಎಮ್. ವಿ. ಆ್ಯಕ್ಟ ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

**<u>ವೌ.ಪ್ರ.ಸಂ.ಪ್ರ.240(2) ರಡಿಯಲ್ಲಿ ಆರೋಪಿತರ ಹೇಳಿಕೆ</u>**

ಪ್ರಶ್ನೆ:1ಃ ಈಗ ಓದಿ ಹೇಳಿದ ಆರೋಪಣೆ ಅರ್ಥವಾಗಿದೆಯೇ?

ಉಃ

ಪ್ರಶ್ನೆ:2ಃ ಹಾಗಿದ್ದಲ್ಲಿ ನಿಮ್ಮ ಸಮಜಾಯಿಷಿಕೆ ಏನು? ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ

ವಿಚಾರಣೆಯಾಗಬೇಕು?

ಉಃ

ದಿನಾಂಕಃ 13.11.2025 ರಂದು ಅಪರಾದಿಗೆ/ಗಳಿಗೆ ತಿಳಿದಿರುವ ಭಾಷೆಯಾದ ಕನ್ನಡದಲ್ಲಿ ನನ್ನ ಸಮಕ್ಷಮ ಓದಿ ಹೇಳಿ ಅಭಿಲೇಖಿಸಿರುವ ಈ ಹೇಳಿಕೆ ಅವರ/ನ ಸರಿಯಾದ ಒಕ್ಕಣೆ ಎಂದು ದೃಢೀಕರಿಸುತ್ತೇನೆ.

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ. ಚಿತ್ತಾಪೂರ.**